# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಸುಂದೋಪಸುಂದರ ಕಾಳಗ

ಕವಿ

## ಮಹಾಬಲೇಶ್ವರ ಬರವಣಿ ಗೋಕರ್ಣ

ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.yakshavahini.com

ಆವೃತ್ತಿ ೧.೦ ಮೇ ೩೦, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com

## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಫಾಟಕ್, ಡಾ. ಪ್ರದೀಪ ಸಾಮಗ, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಅಶ್ವಿನಿ ಹೊದಲ (ಯೋಜನಾ ಕಾರ್ಯದರ್ಶಿ), ವಿಂಧ್ಯಾಶ್ರೀ ಸೋಮಯಾಜಿ (ಯೋಜನಾ ಸಹಕಾರ್ಯದರ್ಶಿ), ನಟರಾಜ ಉಪಾಧ್ಯ, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಪಟ್ಟಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರು ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಂ. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ, ಡಾ. ಪಟ್ಟಾಜೆ ಗಣೇಶ ಭಟ್

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣು ಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ ಉಡುಪಿ, ಯಕ್ಷಸಿಂಚನ ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್. ಎಂ. ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ. ಎಸ್., ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕ ಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಫಾಟಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ರಾಘವೇಂದ್ರ ಮಯ್ಯ (ಲೆಕ್ಕ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಶೆಟ್ಟಿ ವಿ. ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲಾ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ


## ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



ಶ್ರೀಧರ ಡಿ. ಎಸ್.
ಪ್ರಧಾನ ಸಂಪಾದಕರು



ಗಿಂಡೀಮನೆ ಮೃತ್ಯುಂಜಯ
ಸಹ ಸಂಪಾದಕರು



ರವಿ ಮಡೋಡಿ
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ದರ್ಶನವಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**
ಪೌರಾಣಿಕ

**ಆಧಾರ ಗ್ರಂಥ:**
ಮಹಾಭಾರತ

**ಭಾಷೆ:**
ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**
ಆನಂದ ಮುದ್ರಣಾಲಯ, ಗೋಕರ್ಣ

**ಹಕ್ಕುಸ್ವಾಮ್ಯ ವಿವರ:**
ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**
೧೯೪

**ಪಾತ್ರಗಳು:**
ದೇವೇಂದ್ರ, ಅಷ್ಟ ದಿಕ್ಪಾಲಕರು, ನಿಕುಂಭ, ಸುಂದ, ಉಪಸುಂದ, ಬ್ರಹ್ಮ, ವಿಷ್ಣು, ಈಶ್ವರ, ತಿಲೋತ್ತಮೆ

**ಕಥಾ ಸಾರಾಂಶ:**
ಸುಂದ, ಉಪಸುಂದರೆಂಬ ರಾಕ್ಷಸ ಸಹೋದರರು ಬ್ರಹ್ಮನನ್ನು ಕುರಿತು ತಪಸ್ಸು ಮಾಡಿ ಪರಸ್ಪರರಿಂದ ಮಾತ್ರ ಮರಣ ಬರಲಿ ಎಂದು ವರ ಪಡೆಯುವುದು. ಸುಂದೋಪಸುಂದರು ವರಗರ್ವಿತರಾಗಿ ದೇವೇಂದ್ರನನ್ನು ಸೋಲಿಸಿದಾಗ ಶಿವನು ದೇವತೆಗಳ ಪರವಾಗಿ ಹೋರಾಡಿದರೂ ಜಯ ಕಾಣದಾಗಿ, ಹರಿಯನ್ನು ಕರೆಯುತ್ತಾನೆ. ಹರಿಯೂ ಸೋತು, ಸಹೋದರರೊಳಗೇ ಕಲಹ ಬರಿಸುವ ಉಪಾಯವಾಗಿ ತಿಲೋತ್ತಮೆಯನ್ನು ಕಳಿಸುತ್ತಾನೆ. ಅವಳ ಚೆಲುವಿಗೆ ಸೋತ ಸುಂದೋಪಸುಂದರು ಅವಳೊಂದಿಗೆ ಮದುವೆಗೋಸ್ಕರ ಪರಸ್ಪರ ಹೊಡೆದಾಡಿ ಸಾಯುವಂತೆ ಮಾಡುವ ಕಥಾಪ್ರಸಂಗ.

**ಕವಿ ಪರಿಚಯ : (ಆಧಾರ: ಕರ್ನಾಟಕ ಯಕ್ಷಗಾನ ಚರಿತ್ರೆ - ಡಾ. ಕಬ್ಬಿನಾಲೆ ವಸಂತ ಭಾರದ್ವಾಜ)**
ಎಂ.ಜಿ.ಬರವಣಿ (ಮಹಾಬಲೇಶ್ವರ ಗಣಪತಿ ಬರವಣಿ) ಇವರು ಗೋಕರ್ಣದವರು. ಜನನ ೨೦.೨.೧೯೨೫. ವೃತ್ತಿಯಲ್ಲಿ ಅರ್ಚಕರು ಮತ್ತು ಪ್ರವೃತ್ತಿಯಲ್ಲಿ ಯಕ್ಷಗಾನ ಕಲಾವಿದರು. ತಂದೆ ಗಣಪತಿ, ತಾಯಿ ನಾಗವೇಣಿ, ಪತ್ನಿ ಗಂಗಾ. ಅವಂತೀ ಅಮರಾವತಿ ಮುಂತಾದ ೫೮ ಪ್ರಸಂಗಗಳನ್ನು ರಚಿಸಿದ್ದಾರೆ. ಇವರೂ ಅತ್ಯಧಿಕ ಯಕ್ಷಗಾನ ಪ್ರಸಂಗಗಳನ್ನು ರಚಿಸಿದ ಕೀರ್ತಿಭಾಜನರು.

ಇವರು ಬರೆದ ಪ್ರಸಂಗಗಳು: ಚಂದ್ರಮುಖಿ ಸ್ವಯಂವರ, ರಾಣಿ ಸುಲೋಚನ, ಸೌಗಂಧಿಕ ಪುಷ್ಪಾಪಹಾರ, ಚಂದ್ರರೇಖಾ ಪರಿಣಯ, ಭಾನುಮತಿ ಪರಿಣಯ, ವಿದ್ರೂಪ ವಿಜಯ, ರಾಜಾ ಹೃತಧ್ವಜ, ರುಂಡ ಭೈರವ ಕಾಳಗ, ಶ್ರೀ ಶಿವ ಪಾರಿಜಾತ, ಪುಷ್ಪಾವತಿ ಪರಿಣಯ, ಪಾತಾಳ ವಿಜಯ, ವೀರ ಯೂಪಧ್ವಜ, ಶ್ರೀ ಪಂಚಾಕ್ಷರಿ ಪ್ರಭಾವ, ನಹುಷ ಚರಿತ್ರೆ, ದ್ರುವ ದಿಗ್ವಿಜಯ, ಮತಂಗ ಶಾಪ, ವಿಜಯವರ್ಮ ವಿಜಯ, ಶಂಕರನಾರಾಯಣ ಪರಿಣಯ, ಚೋರಾಗ್ರೇಸರ – ರಾಜಶೇಖರ, ಹರಿಶ್ಚಂದ್ರಮತಿ (ಏಕದೃಶ್ಯ ಯಕ್ಷಗಾನ), ಉಗ್ರಸೇನಾಶ್ವಮೇಧ, ಮಾಯಾ ಮಹಿಮೆ, ಕನಕವೇಣಿ, ಮುರ ನರಕಾಸುರರ ಕಾಳಗ, ಕುಂಭಕರ್ಣ ಕಾಳಗ, ವಜ್ರಿ ವಿಜಯ, ಶಿವರಾತ್ರಿ ಮಹಾತ್ಮೆ, ಕರ್ಣ ರತ್ನಾವತಿ, ಶ್ರೀ ಸತ್ಯಗಣಪತಿ ವ್ರತ ಮಹಾತ್ಮೆ, ಸುಂದೋಪಸುಂದರ ಕಾಳಗ

**ಟಿಪ್ಪಣಿ :**

# ಪ್ರಸಂಗ ಸಾಹಿತ್ಯ

**ಭಾಮಿನಿ**
ಕರಿವದನ ಗುಣಸದನ ಗೌರಿಯ |
ತರಳ ಸುರನರವಂದ್ಯ ಗಣಪತಿ |
ಹರನ ಲಿಂಗವ ಧರೆಯೊಳಿರಿಸಿದ ಮಹಿಮಗೆರಗುತಲಿ ||
ಸ್ಮರಿಸಿ ರಮೆ ಉಮೆ ವಾಣಿ ಹಿರಿಯರ |
ಚರಣಕಾನತನಾಗಿ ಸಿದ್ಧಿಯ |
ಕರುಣಿಸೆನ್ನುತಲೊರೆವೆ ಕಥೆಯಿದ ಅರಿತ ತೆರದೊಳಗೆ || ೧ || 1 ||

**ಭೈರವಿ - ಝಂಪೆ**
ಅಮರಲೋಕದಿ ತೋಷ | ಸುಮನಸರ ಜಯಘೋಷ |
ಕಮರಿರಲು ದಿವಿಜೇಶ | ಅಮಿತ ವೈಭವದಿ || ೧ ||

ನೆರಹಿ ಸಭೆಯೊಳಗೆಂದ | ಭರಿತ ಮತ್ಸರದಿಂದ |
ದುರುಳ ದಾನವವೃಂದ | ಬರೆ ಹರಿಯು ಕೊಂದ || ೨ ||

ವೃತ್ರ ಜಂಭರ ಕೊಂದು | ಶಕ್ತಿಯೊಳು ನಾ ಮೆರೆದು |
ಮತ್ತೆ ನಮುಚಿಯ ತರಿದು | ಉತ್ತಮದೊಳಿಹೆವು || ೩ ||

ಹರಿಯ ಕರುಣದಿ ಸುಖವು | ಬರದು ಮುಂದಕೆ ಭಯವು |
ವರ ನೃತ್ಯಗಾಯನವು | ವಿರಚಿಸುತ ನಲಿವು || ೪ || 5 ||

**ಕೇದಾರಗೌಳ - ಅಷ್ಟ**
ವರುಣನು ಎರಗುತ ದಿವಿಜೇಶ ಕೇಳೈಯ |
ಹರುಷಿಪ ಕಾಲವಲ್ಲ ||
ದುರುಳ ಕರ್ಬುರರೆಂದು ಬರುವರೊ ತಿಳಿಯದು |
ಮರೆವುತಲುಳಿವುದಲ್ಲ || ೧ ||

ಎಚ್ಚರದಿಂದಿರೆ ತುಚ್ಛರ ಭಯವಿಲ್ಲ |
ಹೆಚ್ಚುತ ವರಬಲದಿ ||
ಬೆಚ್ಚಿಸಿ ಓಡಿಸಿ ಇಚ್ಛಿಸಿ ಆಳಲು |
ನಿಶ್ಚಿತ ಬಹ ವರದಿ || ೨ || 7 ||

**ಕೇದಾರಗೌಳ - ಅಷ್ಟ**
ಎಂದಿಗೆ ಬರುವುದೊ ಎನ್ನುವ ಭೀತಿಯ |
ಹೊಂದಿರೆ ದಿವಿಜರೆಲ್ಲ ||
ಚೆಂದವೆ ನರ್ತನದಾನಂದ ಗಾಯನ |
ದಿಂದಿರೆ ಉಚಿತವಲ್ಲ || ೧ || 8 ||

**ಸೌರಾಷ್ಟ್ರ - ತ್ರಿವುಡೆ**
ಕಾಲ ಕೇಳುತ ದಿವಿಜಪಾಲನ |
ಕಾಲಿಗೆರಗುತ ಪೇಳೆ ಖೂಳರು |
ದಾಳಿಗೈಯಲು ಎನ್ನ ಪಾಶದಿ | ಬಿಗಿಯುತವರ || ೧ ||

ಮುರಿವೆ ಗರ್ವವ ತರಿವೆ ದುರುಳರ |
ಧುರದೊಳಂಜೆನು ಕಾಲ ಸುರಪುರ |
ಸಿರಿಯ ವೈಭವ ಸೂರೆಗೊಳ್ಳಲು | ಬಿಡಲಿಕುಂಟೆ || ೨ ||

ಚಿಂತೆಬಿಡು ಸುರಕಾಂತ ಮದದಲಿ |
ಹೊಂತಕರು ದಿತಿಪುತ್ರರೈತರೆ |
ಅಂತಕನೆ ನಾ ಹತಿಸಿ ಸಂತಸ | ಪಡಿಪೆ ನಿಮ್ಮ || ೩ || 11 ||

**ಮಾರವಿ - ಏಕ**
ಕನಲುತ ಧನದನು ಸುರಪನಿಗೆರಗುತ |
ದನುಜರ ಭಯವೇಕೆ ||
ಹಣಿಯುವೆ ಕ್ಷಣದಲಿ ದಣಿಸುವೆ ಧೂರ್ತರ |
ತಣಿಸುವೆ ಮನ ಸಾಕೆ || ೧ ||

ಅಮರರು ನಾವಿರೆ ಸಮರಕೆ ಭಯವೇ |
ಕುಮತಿಗಳೈತರಲಿ ||
ಕಮರಿಸಿ ಶಕ್ತಿಯ ಹಿರಿಮೆಯ ತೋರುವೆ |
ಸುಮನಸವಾರದಲಿ || ೨ ||

ಖೂಳರು ಸುರಪುರ ಆಳುವ ಮನದಲಿ |
ಧಾಳಿಯನಿಕ್ಕಿದರೆ ||
ಕಾಳಗದಲಿ ಯಮನಾಲಯ ಸೇರಿಸೆ |
ನಾಳೆಗೆ ಬಂದಪರೆ || ೩ || 14 ||

**ಭಾಮಿನಿ**
ಧನದ ಕಾಲರು ಕನಲಿ ನುಡಿದುದ |
ಅನಿಮಿಷಾಧಿಪ ಕೇಳಿ ಸಂತಸ |
ಮನದೊಳೆಂದನು ದಿಕ್ಕಿನಧಿಪರೆ ನಿಮ್ಮ ಬಲವಿರಲು ||
ಮನುಮಥಯ್ಯನ ಕರುಣದಿಂದಲಿ |
ಬಿನುಗು ದನುಜರ ಭಯವದೇತಕೆ |
ದಿನವ ಹರ್ಷದಿ ಕಳೆದು ಮುಗಿಸುವ ಇಂದಿನೋಲಗವ || ೧ || 15 ||

**ಸೌರಾಷ್ಟ್ರ - ತ್ರಿವುಡೆ**
ಇತ್ತ ಶೋಣಿತಪುರದೊಳೊಂದಿನ |
ಭಕ್ತಪ್ರಹ್ಲಾದಜ ನಿಕುಂಭನು |
ಇತ್ತನೋಲಗ ದೈತ್ಯಮೊತ್ತದ | ನೆರವಿ ಮಧ್ಯ || ೧ ||

ಕನಕಕಶ್ಯಪನಜ್ಜನಾತನ |
ಬಿನುಗುಮೃಗ ರೂಪದಲಿ ಕೊಂದರು |
ಕನಕನೇತ್ರನ ಹಂದಿರೂಪದಿ | ತರಿದರಲ್ಲ || ೨ ||

ಮಾತೆಗರ್ಭವ ಧೂರ್ತತನದಲಿ |
ಘಾತಪಡಿಸುತ ನಮ್ಮ ಧಾತ್ರಿಯ |
ಪೂರ್ತಿ ಮೋಸದಿ ಆಳುತಿರುವರ | ಧರ್ತಿ ಮುರಿಯೇ || ೩ ||

ಕಾಲ ಸಾಧಿಸುತಿರುವೆನಾದರು |
ಕಾಲ ಒದಗದು ವೈರ ತೀರ್ಚಲು |
ಕಾಲ ಸುರಪಾಳಯಕೆ ಮೇಲಿರೆ | ಶ್ರಮವು ವ್ಯರ್ಥ || ೪ || 19 ||

**ಭಾಮಿನಿ ಅರ್ಧ**
ಎನುತಿರುವ ಸಮಯದಲಿ ಆತನ |
ತನಯರಹ ಸುಂದೋಪಸುಂದರು |
ಜನಕನೆಡೆಗಾಗಮಿಸಿ ನಮಿಸುತ ಪಿರಿಯನಿಂತೆಂದ || ೧ || 20 ||

**ಮಾರವಿ - ಏಕ**
ಜನಕನೆ ನುಡಿದುದ ಆಲೈಸಿಹೆ ನಾ |
ಘನಯೋಚನೆಯೇನು ||
ಅನಿಮಿಷವರ್ಗವ ಹಣಿಯುವೆ ನಿಮಿಷದಿ |
ಅನುಮತಿ ಕೊಡೆ ನೀನು || ೧ ||

ತಿಕ್ಕುವೆ ಹರಿಯನು ತಕ್ಕನು ನಿಲ್ಲಪೆ |
ಮುಕ್ಕಣ್ಣಾಗು ಬೆದರೆ ||
ಮುಕ್ಕಡಿ ಗೈಯುವೆ ಸೊಕ್ಕಿಹ ತ್ರಿದಶರ |
ದಿಕ್ಪಾಲರು ಹೋರೆ || ೨ ||

ಅಮೃತವ ಹೀರುತ ಹೆಮ್ಮೆಯೊಳಿರ್ಪರ |
ಹಮ್ಮನು ಮುರಿವುತ್ತ ||
ನಮ್ಮಯ ಕೀರ್ತಿಯ ಚಿಮ್ಮಿಪೆ ದಿಶೆದಿಶೆ |
ಸಮ್ಮತಿಯೇ ತಾತ || ೩ || 23 ||

**ಕೇದಾರಗೌಳ - ಝಂಪೆ**
ಉಪಸುಂದನೆಂದ ನಮಿಸಿ | ದಾನವರ |
ಉಪಹತಿಯು ಬೇಡವೆನಿಸಿ ||
ಕಪಟಿಗರ ಕೀರ್ತಿಯಳಿಸೀ | ಮನದ ವ್ಯಥೆ |
ಉಪಶಮಿಪೆ ನಾನು ಸಹಸಿ || ೧ ||

ಮೋಸಗಾರರು ದಿವಿಜರು | ನಮ್ಮವರ |
ನಾಶಿಸಿದ ಧೂರ್ತರವರು ||
ವೇಷ ಧರಿಸಲು ಶೂರರು | ಬೆದರೆನೈ |
ಶೇಷಶಯನನೆ ಬಂದರು || ೨ ||

ಅನುಮಾನವೇಕೆ ತಾತ | ಕಂಗೆಡಿಪೆ |
ಅನಿಮಿಷರ ನಿನ್ನ ಜಾತ ||
ಅನುಮತಿಯನೀಯೆನ್ನುತ | ಪಂಥದಲಿ |
ಕುಣಿದಾಡೆ ದೈತ್ಯನಾಥ || ೩ || 26 ||

**ಸೌರಾಷ್ಟ್ರ - ತ್ರಿವುಡೆ**
ಬಾಲಕರೆ ಸುಂದೋಪಸುಂದರೆ |
ಕೇಳಿ ನಿಮ್ಮಯ ವೀರ ವಚನವ |
ತಾಳಿದೆನು ಸಂತೋಷವಾದರು | ಸಮಯವಲ್ಲ || ೧ ||

ತೋಳಬಲ ದಾನವರ ಬಲದಲಿ |
ದಾಳಿ ಗೈದರೆ ದಿವಿಜಸ್ತೋಮದಿ |
ಮೇಲ್ಮೆ ಮೆರೆಯದು ಬೇಕು ದೈವೀ | ಬಲವು ನಮಗೆ || ೨ ||

ಗುಪ್ತದಿಂದಲಿ ಶಕ್ತಿ ವರವನು |
ಯುಕ್ತಿಯಿಂದಲಿ ಸಾಧಿಸುತ್ತಲಿ |
ಹತ್ತಿ ನಾಕವ ಕೀರ್ತಿ ಮೆರೆವುದು | ಕಾರ್ಯಸಾಧ್ಯ || ೩ || 29 ||

**ಭಾಮಿನಿ**
ಬಾಲಕರೆ ಬಹು ನಿಷ್ಠೆಯಿಂದಲಿ |
ನಾಳಿಕೋದ್ಭವನನ್ನು ಒಲಿಸುತ |
ಕೇಳಿ ಪಡೆಯಿರಿ ಬುದ್ಧಿ ಚತುರತೆಯಿಂದ ಹಿರಿವರವ ||
ದಾಳಿಗೈಯುತ ನಾಕಲೋಕಕೆ |
ಧೂಳಿ ಗೈಯಿರಿ ಅಮರ ನಗರಿಯ |
ಸೋಲು ಬಾರದು ಜಯವು ಖಂಡಿತ ಮೇಲ್ಮೆ ಮೆರೆಯಿಸಿರಿ || ೧ || 30 ||

**ಮಾರವಿ - ಏಕ**
ನಿಜ ನಿಜ ಜನಕನೆ ಉರುತರ ತಪದಲಿ |
ಅಜನನು ಮೆಚ್ಚಿಸುತ ||
ತ್ರಿಜಗದಿ ಮೆರೆವೆವು ಅಪರೂಪದ ವರ |
ಅಜನಿಂ ಪಡೆಯುತ್ತ || ೧ ||

ಧಿಮ್ಮನೆ ಕಾರಿಪೆ ಕುಡಿದಿಹ ಅಮೃತವ |
ಹಮ್ಮನು ಕುಗ್ಗಿಸುತ ||
ನಮ್ಮಯ ಛಲ ಬಲ ಮೇಲ್ಮೆಯ ಕೀರ್ತಿಯ |
ಚಿಮ್ಮಿಪೆ ಜಯಿಸುತ್ತ || ೨ || 32 ||

**ಮಾರವಿ - ಏಕ**
ಸುಂದುಪಸುಂದರು ನಿನ್ನಯ ಕಂದರು |
ಕುಂದರು ಧೈರ್ಯದಲಿ ||
ತಂದೆಯೆ ತಪಸಿನ ಸಾಧನೆ ಗೈಯಲು |
ಇಂದೇ ಹರುಷದಲಿ || ೧ ||

ನೀಡೈ ಅಪ್ಪಣೆ ನೋಡೈ ಸಾಹಸ |
ರೂಢಿಯೊಳಪರೂಪ ||
ಬೇಡುವೆ ವರವನು ವೈರವ ತೀರ್ಚುವೆ |
ಓಡುವನೈ ಸುರಪ || ೨ || 34 ||

**ದ್ವಿಪದಿ**
ತನಯರಾಡಿದ ನುಡಿಯ ಕೇಳಿ ತೋಷದಲಿ |
ದನುಜರೇಳ್ಗೆಯ ಗೈಯಿರೆಂದು ಹರಸುತಲಿ || ೧ ||

ಶುಭಕೋರಿ ಬೀಳ್ಕೊಡಲು ಉಭಯರುಬ್ಬುತಲಿ |
ಸಬಲರಾಗಲೆ ಪೊರಡೆ ನಮಿಸಿ ವಿಭವದಲಿ || ೨ ||

ಸತ್ಯಲೋಕದ ಬಳಿಗೆ ಬಂದು ಭಕ್ತಿಯಲಿ |
ಶಕ್ತರಿರೆ ತಪದೊಳಗೆ ಅತಿ ನಿಷ್ಠೆಯಲ್ಲಿ || ೩ || 37 ||

**ಮಧ್ಯಮಾವತಿ - ತ್ರಿವುಡೆ**
ಓ ವಿಧಾತನೆ ಸೃಷ್ಟಿಕರ್ತನೆ |
ದೇವಿಶಾರದೆಪ್ರೀತ ಬ್ರಹ್ಮನೆ |
ಕೋವಿದಾತನೆ ಸೃಷ್ಟಿಪಾಲಕಸುತನೆ ಕಾಯೊ | ದಣಿದೆವೆನಲು || ೧ || 38 ||

**ಸುರುಟಿ - ಏಕ**
ದೈತ್ಯರ ತಪಜ್ವಾಲೆ | ಪಸರಿಸೆ |
ಸತ್ಯದ ಲೋಕದಲೆ ||
ಇತ್ತಿರೆ ವಿಧಿ ಸಭೆ | ಚಿತ್ತದಿ ತಿಳಿವುತ |
ಭಕ್ತರ ಇಚ್ಛೆಯ | ಯುಕ್ತವು ಸಲಿಪುದು || ೧ ||

ಎಂದತಿ ತ್ವರಿತದಲಿ | ಅವರೆಡೆ |
ಬಂದುರೆ ಹರುಷದಲಿ ||
ನಿಂದಿರಲುಭಯರು | ವಂದಿಸಲೀವೆನು |
ಚೆಂದದಿ ಮನದಿರ | ಕಂದರೆ ಪೇಳೆನೆ || ೨ || 40 ||

**ಕೇದಾರಗೌಳ - ಅಷ್ಟ**
ಸೃಷ್ಟಿಕರ್ತನೆ ಕಂಡು ಸಂತುಷ್ಟರಾದೆವು |
ಇಟ್ಟಿರು ದಯವನೊಂದ ||
ಎಷ್ಟು ಕೇಳಿದರಿಷ್ಟವೀವ ಮಹಾತ್ಮನು |
ಪಟ್ಟಿಯ ಸಲಿಸೆವೆಂದ || ೧ || 41 ||

**ಸುರುಟಿ - ಏಕ**
ಹೆಚ್ಚಿನ ನುಡಿ ಕೇಳಿ | ಸುಂದರೆ |
ಮೆಚ್ಚಿದೆ ವರ ಕೇಳಿ ||
ಮೆಚ್ಚಿತ್ತಿಹ ವರ | ತುಚ್ಛೀಕರಿಸದೆ |
ಇಚ್ಛೆಯದೇನೆನೆ | ಇಚ್ಛೆಯಿಂದೀವೆ || ೧ || 42 ||

**ಕೇದಾರಗೌಳ - ಅಷ್ಟ**
ಏನ ಕೇಳುವದೆಂದು ಯೋಚಿಸುತುಪಸುಂದ |
ಶ್ರೀನಿವಾಸನ ಸುತನೆ ||
ನೀನೀವುದಾದರೆ ನಮಗಿನ್ನು ಪರರಿಂದ |
ಪ್ರಾಣಕೆ ಹಾನಿಯನ್ನೆ || ೧ ||

ನೀಡದವರ ವರ ನೀಡು ನೀ ಬ್ರಹ್ಮನೆ |
ರೂಢಿಯೊಳಣ್ಣನಿಂದ ||
ನೀಡು ಅಣ್ಣಗೆ ನನ್ನ ಹೊರತಾಗಿ ಮರಣವು |
ತೋಡಿದ ತೆರದೊಳೆಂದ || ೨ || 44 ||

**ಸುರುಟಿ - ಏಕ**
ಸರಿ ಸರಿ ನಾನಿತ್ತೆ | ಕೇಳಿದ |
ತೆರ ವರವೆಂದೆನುತೆ ||
ತೆರಳಿರಲಜವರ | ಗರುವದಿ ಸುಂದನು |
ಅರುಹಿದನನುಜಗೆ | ಹರುಷದೊಳೊಡನೆ || ೧ || 45 ||

**ತೋಡಿ - ಅಷ್ಟ**
ಆಯಿತು | ಕಾರ್ಯ | ಆಯಿತು ||
ಆಯಿತು ಕಾರ್ಯವು ಕೇಳಯ್ಯ ತಮ್ಮ |
ದಾಯಾದಿ ದಿವಿಜರ ಮುರಿಯಲು ಹಮ್ಮ ||
ಸಾಯಿಸಲಾರರು ಪರರಿಂದು ನಮ್ಮ |
ಪಾಯವು ಬಿಗಿಯಾಯ್ತು ವರದಿಂದಲಮಮ || ೧ ||

ಹೇಗಿದೆ | ಬುದ್ಧಿ | ಹೇಗಿದೆ ||
ಅಣ್ಣನೆ ಹೇಗಿದೆ ನನ್ನಯ ಬುದ್ಧಿ |
ಮಿಣ್ಣನೆ ಬೇಡಿದೆ ಆಯಿತು ಸಿದ್ಧಿ ||
ಕುನ್ನಿಗಳಾರಯ್ಯ ಬಂದರೆ ಸುದ್ದಿ |
ಮಣ್ಣನೆ ಕೂಡಿಪ ನಾವುರೆ ಗುದ್ದಿ || ೨ ||

ಭಲೆ ಭಲೇ | ತಮ್ಮ | ಭಲೆ ಭಲೇ ||
ನಾನಿನಗಣ್ಣನು ನೀಯೆನ್ನ ತಮ್ಮ |
ಆನಿಪುದೇನಹ ವೈರವು ಅಮಮ ||
ನೀನೆನ್ನ ಕೊಲ್ವಯ ಮರುಳಾದ ಬ್ರಹ್ಮ |
ನಾ ನಿನ್ನ ಕೊಲ್ವನೆ ವರಕಾಯ್ತು ನಾಮ || ೩ ||

ನಡೆಯಲೋ | ಅಣ್ಣ | ನಡೆಯಲೋ ||
ನಡೆಯಲೊ ಧುರಯಜ್ಞ ಗೈಯಲಿಕಿಂದು |
ಬಿಡುಗಣ್ಣರೆಲ್ಲರ ಗೆಲ್ಲುವದೆಂದು ||
ಸಡಗರದಿಂದಲಿ ಪುರವನು ಪಡೆದು |
ಬೆಡಗಿನೊಳಾಳುವ ಅಣ್ಣನೆ ಮುಂದು || ೪ || 49 ||

**ಭಾಮಿನಿ**
ಅಮಿತ ವಿಭವದೊಳುಭಯ ವೀರರು |
ಕಮಲಸಂಭವವರದ ಗರ್ವದಿ |
ಸುಮನಸರ ಮಾರಾಂತು ಗೆಲ್ಲುವ ಮನದಿ ಬರುತಿರಲು ||
ಅಮರಲೋಕದೊಳಿತ್ತ ಶಚಿಪತಿ |
ಅಮಮ ಸಭೆಯೊಳಗಿರಲು ಚಾರರು |
ನಮಿಸಿ ಪೇಳಿದರಾಗ ದನುಜರ ದಾಳಿಯುಪಟಳವ || ೧ || 50 ||

**ಕಾಂಭೋದಿ - ಅಷ್ಟ**
ಲಾಲಿಸು ಸುರಲೋಕ ಪಾಲ | ನಾ |
ಪೇಳುವೆ ಸತ್ಯಸುಶೀಲ ||
ಜಾಲವಲ್ಲ ಖಳ | ಪಾಳಯ ಬಂದುರೆ |
ಆಲಯ ಮುತ್ತಿರೆ | ಗೋಳನು ಕೇಳು || ೧ ||

ಸುಂದೋಪಸುಂದರಂತೆ | ಧುರ |
ಬಂದೀಗ ಕೊಡುವದಂತೆ ||
ನಿಂದಿಹ ಚಾರರ | ಬಂಧಿಸಿ ಕರವನು |
ನಿಂದಿಸಿ ನಿಮ್ಮನು | ಪಂದೆಗಳಿಹರು || ೨ ||

ಪಾಲಿಸಬೇಕಯ್ಯ ನೀವು | ಆ |
ಖೂಳರ ಬಿಟ್ಟರೆ ನೋವು ||
ತಾಳದೆ ಪೆಟ್ಟನು | ಪೇಳಲು ಬಂದೆವು |
ಕಾಳಗ ಗೈಯುತ | ಪಾಲಿಸಿ ನಮ್ಮ || ೩ || 53 ||

**ಭೈರವಿ - ಝಂಪೆ**
ಕೇಳಿದಿರೆ ಸುರರೆಲ್ಲ | ಖೂಳ ದನುಜರ ಪಾಳ್ಯ |
ಮೇಳವಿಸಿ ಧುರಸೊಲ್ಲ | ಪೇಳಿ ಕಳುಹಿಹರು || ೧ ||

ಮಾರಿಹೋದುದೆ ಶೌರ್ಯ | ತೋರಲಿಲ್ಲವೆ ವೀರ್ಯ |
ಘೋರನಡಗಿಪ ಕ್ರೌರ್ಯ | ಹೋರಿ ಧೈರ್ಯದಲಿ || ೨ || 55 ||

**ಮಾರವಿ - ಏಕ**
ಕೇಳೈ ಸುರಪತಿ ಕಾಲನು ಕೋಪವ |
ತಾಳಲು ಉಳಿವುಂಟೆ ||
ಖೂಳರ ಎದೆಯನು ಸೀಳುವೆ ನಿಮಿಷದಿ |
ಆಳಲು ಬಿಡಲುಂಟೆ || ೧ ||

ತೋಳ್ಬಲ ತೋರುತ ಗೋಳ್ಗುಡಿಸುವೆ ಖರೆ |
ಖೂಳರ ಮೈಸೊಕ್ಕ ||
ಹೋಳಿಯ ಗೈಯುವೆ ತಾಳ್ಮೆ ತೋಷವ |
ಕಾಳಗವೇನ್ ಲೆಕ್ಕ || ೨ || 57 ||

**ಸೌರಾಷ್ಟ್ರ - ತ್ರಿವುಡೆ**
ಹಿಂದೆ ಬಂದಿಹ ಹಂದೆ ದನುಜರ |
ಕೊಂದ ವೀರನು ವರುಣ ಬೆದರೆನು |
ಹಿಂದಿನಂದವ ಮರೆತು ಬಂದಿರೆ | ಕೊಂದು ಕಳೆವೆ || ೧ ||

ಚಿಂತೆಯೇಕೈ ಶಚಿಯ ಕಾಂತನೆ |
ಹೊಂತಕರ ಅಂತಕನ ನಿಳಯಕೆ |
ಅಂತ್ಯಗೈಯುತ ಕಳಿಪೆ ಸಂತಸ | ವಾಂತು ಇಹುದು || ೨ || 59 ||

**ಕೇದಾರಗೌಳ - ಝಂಪೆ**
ವರದ ಬಲದಿಂದಲುಬ್ಬಿ | ದಾನವರು |
ಹಿರಿಯಾಶೆಯಿಂದ ಕೊಬ್ಬಿ ||
ಇರುವರೇ ಬಂದು ಮುತ್ತಿ | ಕಾಲಪುರ |
ತೆರಳುವರು ಹೋರಿ ಸತ್ತಿ || ೧ ||

ಧನದ ರಣಕಂಜೆನಿಂದು | ಚಿಂತೆಬಿಡು |
ದನುಜರನು ಕ್ಷಣದಿ ಕೊಂದು ||
ಘನತೆಯನು ಉಳಿಪೆನೆಂದು | ರೋಷದಲಿ |
ಕುಣಿದಾಡೆ ಕೇಳುತಂದು || ೨ || 61 ||

**ಭೈರವಿ - ಝಂಪೆ**
ಬಿಡುಗಣ್ಣರೊಡೆಯ ಬಲು | ಸಡಗರದ ತೋಷದೊಳು |
ನುಡಿಯೆ ಬುದ್ಧಿಯ ಮರುಳು | ಕೆಡುಕರಿಗೆ ಫಲವೆ || ೧ ||

ಬಿಡದೆ ಧುರವೀಯುತ್ತ | ದಡಿಗನುರೆ ಮುರಿಯುತ್ತ |
ಪೊಡವಿ ರಕ್ಷಿಸಲತ್ತ | ನಡೆಯಲೈ ಸೇನೆ || ೨ || 63 ||

**ಭಾಮಿನಿ**
ದಿವಿಜ ಲೋಕಾಧೀಶ ತನ್ನಯ |
ದಿವಿಜ ಸಂಕುಲ ಕೂಡಿ ಬಾಹ್ಯಕೆ |
ಬವರ ಸಿದ್ಧತೆಯಿಂದ ಬರುತಿರೆ ಸುಂದ ತಡೆದೆಂದ ||
ದಿವಿಜರೊಳು ನೀನಾರು ಮಘವನೆ |
ವಿವರವೆಲ್ಲವನರಿತು ಬಂದಿಹೆ |
ದಿವಿಜನಗರಿಯ ಬಿಟ್ಟು ತೆರಳೆಲೊ ಮೋಸಕೆಡೆಯಿಲ್ಲ || ೧ || 64 ||

**ಮಾರವಿ - ಏಕ**
ಅನಿತರೊಳೆಂದನು ವರುಣನು ಸುರಿಸುತ |
ಕಣೆಗಳ ತಡೆತಾಪ ||
ಬಿನುಗನೆ ಸುರಪುರವಾಶಿಸ ದಾರಿಯು |
ಇನಸುತಮನೆ ಪೋಪ || ೧ || 65 ||

**ಕೇದಾರಗೌಳ - ಝಂಪೆ**
ಮಥನದೊಳು ಅಮೃತ ಹೀರಿ | ಸುರಪೀಠ |
ಮೃತಿಯಿಲ್ಲವೆಂದು ಏರಿ ||
ದೈತ್ಯರಿಗೆ ಮೋಸ ಬೀರಿ | ಮೆರೆವಿರೇ |
ಕಥೆ ಮುಗಿಪೆನಿಂದು ಹೋರಿ || ೧ || 66 ||

**ಮಾರವಿ - ಏಕ**
ಕೆಡುಕರು ಸುಧೆ ಕೊಡೆ ಕೆಡುವುದು ಲೋಕವು |
ಕೊಡದಿರಲುಚಿತೆನುತ ||
ಕಡಲಜೆಪ್ರೀತನೆ ಕುಡಿಸಿದ ಸುರರಿಗೆ |
ಅಡರಿತೆ ಸುರೆಪಿತ್ಥ || ೧ || 67 ||

**ಕೇದಾರಗೌಳ - ಝಂಪೆ**
ತಿಂದಮೃತವನ್ನು ಇಂದು | ಕಾರಿಸುತ |
ಇಂದೇರ್ವೆ ಪೀಠವೆಂದು ||
ಸುಂದ ಬಿಡೆ ಕಣೆಯನೊಂದು | ಮೂರ್ಛೆಯನು |
ಹೊಂದಿದನು ವರುಣನಂದು || ೧ || 68 ||

**ಸೌರಾಷ್ಟ್ರ - ತ್ರಿವುಡೆ**
ಕಾಲ ಕಾಣುತ ಕೆರಳಿ ಕೋಲ್ಗಳ |
ಜಾಲವೆಸೆಯುತ ತಡೆದು ಖೂಳನೆ |
ಕಾಲಪಾಶದಿ ಬಿಗಿದು ದಡಿಗನೆ | ಕೊಲ್ವೆನೆನಲು || ೧ || 69 ||

**ಮಾರವಿ - ಏಕ**
ಭಲೆ ಭಲೆ ಕಾಲನೆ ಕೊಲ್ಲುವ ಧೀರನೆ |
ತಿಳಿದಿಹೆ ಬಲವೆಲ್ಲ ||
ಬಲಯುತ ದನುಜರು ದಾಳಿಯನಿಟ್ಟರೆ |
ಅಳುತಡಗಿಹುದೆಲ್ಲ || ೧ || 70 ||

**ಸೌರಾಷ್ಟ್ರ - ತ್ರಿವುಡೆ**
ವರದ ಬಲದಿಂದುಬ್ಬಿ ಬಂದಿರೆ |
ಸರಿದೆ ಮರೆಯಲಿ ಕೊನೆಗೆ ಖೂಳರ |
ಪರಿಯು ತಿಳಿಯದೆ ಮರಣಪಟ್ಟಿಹ | ಹದನವೆಲ್ಲ || ೧ || 71 ||

**ಮಾರವಿ - ಏಕ**
ಹಿಂದಿನ ಅಂದವು ಇಂದಿನದಲ್ಲವು |
ಹೊಂದೆವು ಮರಣವನು ||
ಹೊಂದಿಹೆ ವರಬಲ ಕುಂದಿಪೆನೆಲ್ಲರ |
ಹೊಂದಲು ನಗರವನು || ೧ || 72 ||

**ಸೌರಾಷ್ಟ್ರ - ತ್ರಿವುಡೆ**
ಅಮರ ಲೋಕವು ಕುಮತಿ ದೈತ್ಯರ |
ಭ್ರಮೆಯು ಆಳುವೆನೆಂಬ ಅಮಲಲಿ |
ಸಮರ ಗೈಯುತ ಶ್ರಮವ ವ್ಯಯಿಸುತ | ಮಡಿವರೆಲ್ಲ || ೧ || 73 ||

**ಮಾರವಿ - ಏಕ**
ಅಂತ್ಯವ ಗೊಳಿಸುವ ಶರಬಿಡು ಅಂತಕ |
ನಿಂತಿಹೆ ಧುರಸಿದ್ಧ ||
ಕುಂತದಿ ಬಡಿಯುವೆ ಆಂತುಕೊಯೆನ್ನುತ |
ಹೊಂತಕನಿಡೆ ಬಿದ್ದ || ೧ || 74 ||

**ಭಾಮಿನಿ**
ಬಿದ್ದ ವೈವಸ್ವತನ ಕಾಣುತ |
ರುದ್ರನಂದದಿ ಧನದ ಘರ್ಜಿಸಿ |
ಕ್ಷುದ್ರ ತೋರೆಲೊ ಶೌರ್ಯ ಸಮರಕೆ ಸಿದ್ಧನಿಹೆನೆನಲು ||
ಎದ್ದ ಸುಂದನ ತಡೆಯುತನುಜನು |
ಬುದ್ಧಿಗೇಡಿಗಳಿವರ ಗುದ್ದುತ |
ಯುದ್ಧ ಸಾಕೆನಿಸುವೆನು ಸುದ್ದಿಗೆ ಬಾರದಂದದಲಿ || ೧ || 75 ||

**ಮಾರವಿ - ಏಕ**
ಯಾರೋ ಬಾರೋ ತೋರೆಲೊ ಶೌರ್ಯವ |
ಏರಿದ ಸುಧೆಪಿತ್ಥ ||
ಭೋರನೆ ಇಳಿಸುವೆ ಏರುವೆ ಗದ್ದುಗೆ |
ಸೇರಿಪೆ ಕಾಡೆನುತ || ೧ || 76 ||

**ಕೇದಾರಗೌಳ - ಝಂಪೆ**
ನುಡಿ ಕೇಳಿ ಧನದನೆಂದ | ಸುರಪೀಠ |
ಅಡರುವೆವು ಎಂದು ಬಂದ ||
ದಡಿಗರಿರ ಮರವೆಯಾಯ್ತೆ | ಗರ್ಜಿಸಲು |
ಕುಡಿದಮಲು ತಲೆಗೇರಿತೆ || ೧ || 77 ||

**ಮಾರವಿ - ಏಕ**
ಮೋಸಜಾಲವ ಬೀಸುತ ದನುಜರ |
ನಾಶಿಸಿ ಮೆರೆದಿಹಿರಿ ||
ಘೋಷಿಸಿ ವಿಜಯವ ಸಾಧಿಸೆ ದಿವಿಜಾ |
ಧೀಶನ ತ್ವರೆ ತೋರಿ || ೧ || 78 ||

**ಕೇದಾರಗೌಳ - ಝಂಪೆ**
ಧುರ ಗೈಯಲೇತಕೊಡೆಯ | ನನ್ನೊಡನೆ |
ಧುರ ನೀಡಿ ತೋರು ಶೌರ್ಯ ||
ಧುರ ದುರಂಧರ ಧನದನು | ಖಳರೊಡನೆ |
ಧುರಗೈದು ಗೆದ್ದಿರುವೆನು || ೧ || 79 ||

**ಮಾರವಿ - ಏಕ**
ಬಿಡು ಬಿಡು ಬಾ ಬಡಿವಾರವ ಕಡುಹಿರೆ |
ತಡೆ ಹಿಡಿ ಶರವೆಂದು ||
ತೊಡುತಿಡೆ ಕೂರ್ಗಣೆ ಪೊಡವಿಯೊಳುರುಳಿದ |
ದಡಿಗನು ನಲಿನಲಿದು || ೧ ||

ದಿಕ್ಕಿನ ಪಾಲರ ಸೊಕ್ಕನು ಮುರಿವುತ |
ರಕ್ಕಸನುಪಸುಂದ ||
ಠಕ್ಕಿನ ಸುರಪನ ಫಕ್ಕನೆ ತೋರಿರೊ |
ತಿಕ್ಕುವೆನೆನೆ ಬಂದ || ೨ || 81 ||

**ಭೈರವಿ - ಅಷ್ಟ**
ಸುರಪನೆಂಬವನೆ ನೀನೂ | ಬಲ್ಲೆನು ನಿನ್ನಾ |
ಚರಿತೆಗಳೆಲ್ಲ ನಾನೂ ||
ಸುರಪುರಭೋಗವ | ತ್ವರಿತದೊಳೆಮಗಿತ್ತು |
ತೆರಳುವದೊಳಿತೆನ್ನಲೂ || ೧ || 82 ||

**ಮಾರವಿ - ಏಕ**
ಸುಂದುಪಸುಂದರೆ ಬಂದಿರೆ ಭಲೆ ಭಲೆ |
ಇಂದೆನಗತಿ ಹರುಷ ||
ಸಂದಿತು ಬಹುದಿನ ಕಾಹುರ ಗೈಯದೆ |
ಕುಂದಿಪೆ ದೇವೇಶ || ೧ || 83 ||

**ಭೈರವಿ – ಅಷ್ಟ**
ಅರಿತಿಹೆ ವಿಕ್ರಮವಾ | ಶಚಿ ಕಾಂತನೆ |
ಬರಿದೇಕೆ ಪೌರುಷವಾ ||
ಮೆರೆಸುವೆ ದಿತಿಜರು | ಪುರ ಮುತ್ತೆ ಬೆದರುತ |
ತಿರುಗಿದೆ ವನವನವಾ || ೧ || 84 ||

**ಮಾರವಿ – ಏಕ**
ಕೆಡುಕರು ಕುಡುಕರು ನೀತಿಯ ನುಡಿದರೆ |
ನಡೆವರೆ ಸರಿದಾರಿ ||
ಪಡೆಯಲು ಆಶಿಸೆ ಪರರಾ ಒಡವೆಯ |
ಕೆಡುಕಿಗೆ ಹಿರಿದಾರಿ || ೧ || 85 ||

**ಭೈರವಿ - ಅಷ್ಟ**
ಹಕ್ಕಿನ ಪಟ್ಟವನೂ | ಬಿಡೌಜನೆ |
ದಕ್ಕಿಸಿ ನುಡಿವೆಯೇನೂ ||
ರಕ್ಕಸ ಬಲದಲಿ | ಸೊಕ್ಕನು ಮುರಿವುತ |
ನಕ್ಕರಿ ನಲಿಯುವೆನೂ || ೧ || 86 ||

**ಮಾರವಿ - ಏಕ**
ವೃತ್ರನ ಜಂಭನ ಕೊಂದಿಹ ಶಕ್ರನು |
ಮತ್ತತೆ ತೋರುವೆಯ ||
ಮತ್ತನು ಇಳಿಸುವೆ ವ್ಯರ್ಥವು ಆಹವ |
ಹತ್ತಿಪೆ ಯಮಪುರಿಯ || ೧ ||

ಭಲೆ ಭಲೆ ಪರರಾ ಹಂಗಿಲಿ ಗೆಲ್ಲುವ |
ಬಲಯುತನೇ ವಜ್ರಿ ||
ತಿಳಿವೆಯ ವರಬಲ ಅಳಿಸರು ಜಗದಲಿ |
ಅಳಿಸುವೆ ಹಗೆ ತೀರ್ಚಿ || ೨ || 88 ||

**ಶಂಕರಾಭರಣ - ಮಟ್ಟೆ**
ಹೆಚ್ಚಿನಾಡ ಬೇಡ ದೈತ್ಯ |
ತುಚ್ಛ ಮುಚ್ಚು ಬಾಯನೆನುತ |
ರೊಚ್ಚಿನಿಂದ ಶಚಿಯ ಕಾಂತ | ಎಚ್ಚ ಬಾಣವ || ೧ ||

ಬಿಟ್ಟ ಶರವ ಖಂಡಿಸುತ್ತ |
ದಿಟ್ಟ ಗದೆಯ ತಿರುಹಿಸುತ್ತ |
ಕುಟ್ಟಿ ಕಳೆವೆನೆನುತ ಬಡಿಯೆ | ಥಟ್ಟನೊರಗಿದ || ೨ || 90 ||

**ತೋಡಿ - ಅಷ್ಟ**
ಏಳಯ್ಯ | ಹೋರೆ | ಏಳಯ್ಯ ||
ಏಳಯ್ಯ ದೇವೇಶ ನೀ ಬಲುಧೀರ |
ಕಾಳಗದಲಿ ಖಳವಾರಸಂಹಾರ ||
ಭೂಲಲನೆಯನಪ್ಪಿ ಏನು ವಿಚಾರ |
ಕಾಲವು ಕೆಟ್ಟಿತು ಬಿಡು ಬಿಡು ಊರ || ೧ ||

ಭಾರವೆ ಎತ್ತಲು ವರ ವಜ್ರದಂಡ |
ನಾರಿಗೆ ಮುಖವೆಂತು ತೋರುವೆ ಭಂಡ ||
ಹೋರಿದ ಶ್ರಮವೆಲ್ಲ ಆಯಿತು ದಂಡ |
ತೋರೆಲೊ ಪೌರುಷ ಏ ಸುರಗಂಡ || ೨ ||

ಹೀರಿದ ಸುಧೆಶಕ್ತಿ ಹೋಯಿತೆ ಹಾರಿ |
ವೀರನು ಭಲೆ ಭಲೆ ಅಹುದೊ ಜಂಭಾರಿ ||
ಧಾರಿಣಿಗೊರಗಿದೆ ಏತಕೆ ಹೋರಿ |
ಸೇರಿಸು ಯಮಪುರ ಶಕ್ತಿಯ ತೋರಿ || ೩ || 93 ||

**ಭಾಮಿನಿ**
ಪರಿಕಿಸಗ್ರಜ ಸುರಪ ಧರೆಯಲಿ |
ಅರರೆ ಬಿದ್ದಿಹ ಧುರವ ಗೈಯುವ |
ವರ ಸಮರ್ಥರ ಕಾಣೆ ಗದ್ದುಗೆಯೇರಿ ಆಳಿರುವ ||
ಹರುಷವಾಯತು ತಮ್ಮ ನಡೆ ನಡೆ |
ಪುರ ಪ್ರವೇಶಿಸಿ ಸಕಲ ಸುರಸಿರಿ |
ಭರಿತ ವೈಭವದಿಂದ ಭೋಗಿಪುದೆನುತ ತೆರಳಿದರು || ೧ || 94 ||

**ಮಧ್ಯಮಾವತಿ - ತ್ರಿವುಡೆ**
ಇತ್ತ ಸುರಪತಿ ಮೂರ್ಛೆ ತಿಳಿಯುತ |
ಅತ್ತು ಮರುಗುತ ನಮಗಿದೆಂತಹ |
ಕುತ್ತು ಒದಗಿತು ಶಂಭು ಹೇ ಶಿವ ಕಾಯ್ವುದೆನುತ |
ಕಥಿಸೆ ವ್ಯಥೆಯ || ೧ ||

ಬಾರೊ ಶಂಕರನೆನುತ ಸ್ಮರಿಸಿದ |
ತೋರಿ ಶೌರ್ಯವ ಖಳರ ಮರ್ದಿಸಿ |
ಧೈರ್ಯ ಕೊಡು ಕೊಡು ರುಂಡಹಾರನೆ ಸುರರ ನಗರಿ |
ಸೂರೆ ಹೋಯ್ತು || ೨ || 96 ||

**ಮಾರವಿ - ಏಕ**
ಇಂತೀ ಪರಿ ಸುರಕಾಂತನು ಸ್ಮರಿಸಲು |
ಕಂತುಸಂಹಾರಕನು ||
ಅಂತಕನಂದದಿ ಹೂಂಕರಿಸುತ ಬರೆ |
ಚಿಂತೆಯನುಸುರಿದನು || ೧ ||

ಬಿಡು ಬಿಡು ಭಯವನು ಹಿಡಿಯೈ ಧೈರ್ಯವ |
ಮೃಡನೆಡೆ ಧುರ ನೀಡಿ ||
ದಡಿಗರು ಉಳಿವರೆ ನಡುವೆನು ಕಣ್ ಕಿಡಿ |
ಸುಡುವೆನು ನೀವ್ ನೋಡಿ || ೨ ||

ಎಂದತಿ ಧೈರ್ಯವ ಸುರಪನಿಗರುಹುತ |
ಚಂದಿರಧರನಂದು ||
ಬಂದಿರೆ ಕಾಣುತ ಸುಂದನು ನುಡಿಸಿದ |
ಚೆಂದದಿ ತಡೆ ನಿಂದು || ೩ || 99 ||

**ಸೌರಾಷ್ಟ್ರ - ತ್ರಿವುಡೆ**
ಸುರರ ರಕ್ಷಣೆಗೆಂದು ನಮ್ಮೊಳು |
ಧುರವ ಗೈಯಲು ಬಂದೆಯೇತಕೆ |
ಪರಶಿವನೆ ವಂದನೆಯು ಪಾದದಿ | ಜಯಕೆ ಹರಸು || ೧ || 100 ||

**ಕೇದಾರಗೌಳ - ಅಷ್ಟ**
ಸುರರ ಸುಂದನೆ ಇಂದು ವಂದಿಪುದೇತಕೆ |
ಕೊಳಗುಳ ಗೈಯೆನಿಂತು ||
ಗಳಿಸಿಹೆ ವರವೆಂದು ಸುರರನ್ನು ಸೊಕ್ಕಿಲಿ |
ಬಳಲಿಪೆ ಯಾತಕಿಂತು || ೧ || 101 ||

**ಸೌರಾಷ್ಟ್ರ - ತ್ರಿವುಡೆ**
ದಾನವರ ಕುಲದೇವ ನೀನೇ |
ಸ್ಥಾಣು ವಂದಿಸೆ ತಪ್ಪೆ ದಿವಿಜರು |
ತ್ರಾಣಿ ದೈತ್ಯರ ಕೊಂದ ಧೂರ್ತರು | ಮರತೆಯೇನು || ೧ || 102 ||

**ಕೇದಾರಗೌಳ - ಅಷ್ಟ**
ದುರುಳತ್ವ ತೋರಿದ ದನುಜರ ತರಿದರು |
ಸುರರಲಿ ತಪ್ಪಿಲ್ಲವು ||
ಮರುಳು ಬುದ್ಧಿಯ ತೋರೆ ಮರಣವು ಖಂಡಿತ |
ಪುರ ಸೇರಲತಿ ಸುಖವು || ೧ || 103 ||

**ಸುರುಟಿ - ಏಕ**
ಮರುಳನು ನಾನಲ್ಲ | ಅರಿಯರು |
ಮರಣದವರ ಮೂಲ ||
ದುರುಳಗೆ ಅನಲದ | ಕರವನು ಈಯುತ |
ಭರದೊಳಗೋಡಿದ | ಮರುಳನು ಯಾರೈ || ೧ ||

ಶಾರದೆಪ್ರೀತನನು | ಈಕ್ಷಿಸೆ |
ಸಾರುತ ರುಂಡವನು ||
ಘೋರನೆ ಚಿವುಟುತ | ಹೀರಿರೆ ರಕ್ತವ |
ಊರನು ಅಲೆದಿಹ | ಮರುಳನು ನೀನು || ೨ ||

ತೆರೆಯುತ ಪಣೆಕಣ್ಣು | ಸುಡುವರೆ |
ಸ್ಮರನಲ್ಲವೊ ನಾನು ||
ತರಿಯಲು ತ್ರಿಪುರನೆ | ಮರಣಿಸೆ ಸತಿಪೆಣ |
ತಿರುಗಿದೆ ಹೊತ್ತುರೆ | ಮರುಳನು ನೀನೆನೆ || ೩ || 106 |

**ಶಂಕರಾಭರಣ - ಮಟ್ಟೆ**
ನುಡಿಯ ಕೇಳಿ ಕಿಡಿಯನುಗುಳಿ | ಕೆಡುವೆಯೆನುತಲಿ ||
ಮೃಡನು ಶರವನೆಸೆದನಾಗ | ದಡಿಗ ನಗುತಲಿ || ೧ ||

ಪರರು ನಮ್ಮ ಮರಣಪಡಿಸೆ | ಧರೆಯೊಳಾಗದು ||
ವರದ ಮಹಿಮೆ ಬರಿದೆ ಶ್ರಮವು | ತೆರಳಿ ಪೋಪುದು || ೨ ||

ಬಲ್ಲೆಯೇನು ಪ್ರಳಯ ಗೈವೆ | ಸೊಲ್ಲ ನಿಲ್ಲಿಸು ||
ಖುಲ್ಲ ಚಲ್ಲವರಿವೆ ಧುರಕೆ | ನಿಲ್ಲು ಸೋಲಿಸು || ೩ || 109 ||

**ಭಾಮಿನಿ**
ಮೃಡನು ಖಾಡಾ ಖಾಡಿ ಕಾಳಗ |
ಕೊಡುತ ಚಿಂತಿಸೆ ಮನದೊಳಿವರನು |
ಮಡಿಸುವುದು ತನ್ನಳವಿಗಾಗದ ಕಾರ್ಯವೆಂದೆನುತ ||
ಕಡಲಶಯನನೆ ಹರಿಯೆ ಶ್ರೀಪತಿ |
ಕಡಲಜಾತೆಯ ಪ್ರೀತ ರಕ್ಷಿಸು |
ಪೊಡವಿಪಾಲಕ ನೀನೆ ಬಾ ಬಾರೆಂದು ನುತಿಸುತಿರೆ || ೧ || 110 ||

**ಸುರುಟಿ - ಏಕ**
ಸಿರಿವರ ಮೈದೋರಿ | ಬಂದಿಹೆ |
ಒರೆಯೈ ವ್ಯಥೆ ತೂರಿ ||
ಸರಸಕೊ ವಿರಸಕೊ | ಕರೆದಿಹುದೇತಕೆ |
ಸ್ಮರಿಸಿದ ಕಾರಣ | ಅರುಹೈ ಶಂಕರ || ೧ || 111 ||

**ಮಧ್ಯಮಾವತಿ - ತ್ರಿವುಡೆ**
ಕೇಳು ಶ್ರೀಹರಿ ಕನಕಕಶ್ಯಪ |
ಬಾಲಪ್ರಹ್ಲಾದಜ ನಿಕುಂಭನ |
ಬಾಲಕರು ಸುಂದೋಪಸುಂದರು ಸ್ವರ್ಗ ಹತ್ತಿ |
ದಾಳಿ ಗೈದು || ೧ ||

ಸುರರ ಕಂಗೆಡಿಸಿರಲು ಶಚಿಪತಿ |
ಸ್ಮರಿಸಲೆನ್ನನು ಬಂದು ಧುರ ಕೊಡೆ |
ದುರುಳಮರ್ದನ ಸಾಗದಾಯಿತು ಕರೆದೆ ನಿನ್ನ |
ಪೊರೆಯೊ ಸಖನೆ || ೨ || 113 ||

**ಸುರುಟಿ - ಏಕ**
ಸೃಷ್ಟಿಯ ಲಯಕರ್ತು | ನೀನಹೆ |
ಪಟ್ಟೆಯ ವ್ಯಥೆ ಸೋತು ||
ದೃಷ್ಟಿಸಲೀ ಕಥೆ | ದುಷ್ಟರ ಶಿಕ್ಷಿಸೆ |
ಅಷ್ಟು ಸಮರ್ಥನೆ | ಕಷ್ಟವು ಆಗದು || ೧ || 114 ||

**ಮಧ್ಯಮಾವತಿ - ತ್ರಿವುಡೆ**
ಕರ್ಮಕಾರಣಕರ್ತ ಶಕ್ತಿಯ |
ಮರ್ಮವೆಂದರೆ ಅಮಮ ನೀನೇ |
ವರ್ಮದಾ ನುಡಿಯಾಕಥರ್ಮರ ತರಿದು ಕಾಟ |
ಶಮಿಸಿ ಸಲಹೊ || ೧ || 115 ||

**ಸುರುಟಿ - ಏಕ**
ಧುರ ಸರಿ ನೆಪಮಾತ್ರ | ಆಪುದು |
ಸರಿ ಖರೆ ವಿಧಿಸೂತ್ರ ||
ತರಿವೆನು ದುರುಳರ | ಪೊರೆಯುವೆನೆನ್ನುತ |
ಹರಿ ಬರೆ ಕಾಣುತ | ಒರೆದುಪಸುಂದನು || ೧ || 116 ||

**ಶಂಕರಾಭರಣ - ರೂಪಕ**
ಹರುಷವಾಂತೆ ಕಂಡು ಬರವನೆ | ಪೋಪುದೆಲ್ಲಿ |
ಅರಿವೆನೆಲ್ಲ ಕಪಟ ಕೃತಿಯನೆ ||
ಶೇಷಶಯನ ಮೋಸಗಾರ |
ಶೇಷವಿಷವೆ ನಿನ್ನ ಸಾರ ||
ವೇಷ ಧರಿಸೆ ಬಹಳ ಶೂರ |
ಈಶ ಪೋದ ಬೆದರಿ ದೂರ || ೧ ||

ಸುರರ ಪೊರೆಯೆ ಬಂದೆಯೇನು |
ಶರಧಿ ಮಥನವಲ್ಲವಿನ್ನು ||
ಇರಿಸೆ ಪಾದ ಬಲಿಯೆ ನಾನು |
ಮರೆಯದಲ್ಲ ಕಪಟ ಮೇಣು || ೨ ||

ಇಲ್ಲಿ ರಾಹು ಕೇತುವಿಲ್ಲ |
ಕಳ್ಳ ಕುಡಿಸೆ ಮರುಳನಲ್ಲ ||
ಕೊಲ್ಲೆ ವೇಷ ನಡೆಯದಲ್ಲ |
ಬಲ್ಲೆಯೇನು ಮರಣ ಮೂಲ || ೩ ||

ನಾರಸಿಂಹನಾಗೆ ಕಂಭ |
ತೋರದಿಲ್ಲಿ ಅಮೃತಕುಂಭ ||
ಸಾರಿ ಬಂದುದೇತಕಬ್ಬ |
ಸೇರು ಶರಧಿ ಪದ್ಮನಾಭ || ೪ || 120 ||

**ಮಾರವಿ - ಏಕ**
ಬಿಡು ಬಿಡು ಬಾ ಬಡಿವಾರದ ನುಡಿಗಳ |
ದಡಿಗ ಖಳಾಧಮನೆ ||
ತೊಡುವದದೇತಕೆ ವೇಷವ ಕೊಲ್ಲಲು |
ಬಿಡುವೆನು ಚಕ್ರವನೆ || ೧ || 121 ||

**ಕೇದಾರಗೌಳ - ಝಂಪೆ**
ಚಕ್ರಕಂಜದ ಧೀರನು | ಗೆಲ್ದಿರುವೆ |
ಶಕ್ರ ಮುಕ್ಕಣ್ಣರನ್ನು ||
ಇಕ್ಕಿರುವ ವಿಧಿ ವರವನು | ಸಾವಿಲ್ಲ |
ವಕ್ರಿಸುವೆ ತವ ಬಲವನು || ೧ || 122 ||

**ಮಾರವಿ - ಏಕ**
ಕೆಡಿಸಿದೆ ಸುರಪುರ ಕಾಡಿದೆ ದಿವಿಜರ |
ಮಡಿಯುವೆ ರಣದಲ್ಲಿ ||
ತುಡುಗರ ಬುದ್ಧಿಯು ಕೆಡಲುರೆ ದಾರಿಯು |
ನಡೆ ನಡೆ ಬೇಗದಲಿ || ೧ || 123 ||

**ಕೇದಾರಗೌಳ - ಝಂಪೆ**
ತೆರಳೆ ನಾ ಬರಲಿಲ್ಲವೂ | ನಮ್ಮವರ |
ತರಿದಿರುವೆ ವೈರ ನೋವು ||
ಸುರನಗರವೆಮ್ಮ ಪುರವು | ಪಡೆದಾಳಿ |
ಮೆರೆವುದೇ ನಮಗೆ ನಲಿವು || ೧ || 124 ||

**ಮಾರವಿ - ಏಕ**
ಖೂಳರು ಸುರಪುರವಾಳಲು ಜಗದಲಿ |
ಬಾಳುವೆ ಬಲುಕಷ್ಟ ||
ಸೀಳುತ ರಕ್ತದ ಓಕುಳಿಯಾಡುವೆ |
ತಾಳೆಯೊ ನೀ ಪೆಟ್ಟ || ೧ || 125 ||

**ಕೇದಾರಗೌಳ - ಝಂಪೆ**
ಮುತ್ತಜ್ಜರನ್ನು ಕೊಂದ | ಎಲೆ ಪಾಪಿ |
ದೈತ್ಯರಿಗೆ ಸುರೆ ನೀಡಿದ ||
ಕೃತ್ಯ ಸರಿಯೇನು ಬಂದ | ನಿನ್ನನುರೆ |
ಹತ್ತಿಕ್ಕಿ ನಡೆವೆನೆಂದ || ೧ || 126 ||

**ಮಾರವಿ - ಏಕ**
ದುಷ್ಟರ ತರಿಯುತ ಶಿಷ್ಟರ ಪೊರೆಯುವ |
ಸೃಷ್ಟಿಯ ಪಾಲಕನು ||
ಕುಟ್ಟುತ ಯಮಪುರಕಟ್ಟುವೆನೆನ್ನುತ |
ಬಿಟ್ಟನು ಶರವನ್ನು || ೧ ||

ಎಸೆದಿಹ ಕಣೆಗಳ ತರಿದುಪಸುಂದನು |
ಮಸೆಯುತ ಪಲ್ಗಳನು ||
ಹೊಸ ಹರಿತಂಬನುಯೆಸೆಯಲು ಸಿರಿವರ |
ರಸೆಯೊಳಗೊರಗಿದನು || ೨ || 128 ||

**ಭಾಮಿನಿ**
ದೃಷ್ಟಿಸಲೆ ನೀನಣ್ಣ ಸೃಷ್ಟಿಯ |
ದುಷ್ಟರನು ಕುಟ್ಟುತ್ತ ಪಾಲಿಪೆ |
ಸೃಷ್ಟಿಕರ್ತನ ಪಿತನು ಮೂರ್ಛಿಸೆ ತುಷ್ಟಿ ತಮಗಿಂದು ||
ಪಟ್ಟವೈಭವ ಸಿರಿಯ ಭೋಗವು |
ಗಿಟ್ಟಿತಹಹಾ ಶ್ರಮವು ಸಾರ್ಥಕ |
ಗಟ್ಟಿಗರು ಇನ್ನಿಲ್ಲ ಬಾ ಬಾರೆನುತ ನಿರ್ಗಮಿಸೆ || ೧ || 129 ||

**ಮಧ್ಯಮಾವತಿ - ತ್ರಿವುಡೆ**
ಅಚ್ಯುತನು ಮೂರ್ಛೆಯನು ಕಳೆಯುತ |
ಲೆಚ್ಚರಿತು ಚಿಂತಿಸಿದ ಮನದಲಿ |
ಹೆಚ್ಚಿದರು ವಿಧಿವರದಿ ಬಲದೊಳು ತುಚ್ಛರಿಂದು |
ಮರಣಪಡಿಸೆ || ೧ ||

ಹಚ್ಚಬೇಕೈ ಕಲಹವನು ನಿಜ |
ಕಿಚ್ಚನಿಡುವರೆ ಬಂಧು ಪ್ರೇಮಕೆ |
ಮೆಚ್ಚುವೋಹನೆ ಬೇಕೆನುತ್ತಲಿ ಕರೆದನಾಗ |
ಬಿಚ್ಚು ಮನದಿ || ೨ || 131 ||

**ಬೇಗಡೆ - ರೂಪಕ**
ಬಾರೆ ಬಾ ತಿಲೋತ್ತಮೆ | ವಿಶ್ವಕರ್ಮರಚಿತ ಭಾಮೆ |
ಮಾರವಿದ್ಯದಲಿ ನಿಸ್ಸೀಮೆ ||
ನರ ನಾರಾಯಣ ಕುಮಾರಿ |
ನರರ ಹೃದಯಕಮಲಭ್ರಮರಿ |
ಸುರರ ಪೊರೆಯೆ ನಗೆಯ ಬೀರಿ |
ಹರಿಯು ನಾನೆ ಕರೆವೆ ಬಾರೆ || ೧ || 132 ||

**ಸುರುಟಿ - ಏಕ**
ಬಂದೆನು ಶ್ರೀನಾಥ | ಪಾದಕೆ |
ವಂದಿಪೆ ವಿಧಿತಾತ ||
ಬಂದು ಮುಂದೆ ನಾ | ನಿಂದಿಹೆನಿಂದಿಗೆ |
ಕುಂದರದನೆ ಕರೆ | ದಂದವನರುಹೈ || ೧ || 133 ||

**ಬೇಗಡೆ - ರೂಪಕ**
ಭಾಮೆ ನೀನೆ ಪ್ರೇಮಲೆ | ಕಾಮನಿಟ್ಟ ನಯನದಲೆ |
ಕಾಮಕರೆಗೆ ಹಿರೆ ಬಲೆ ||
ಕುಮತಿ ಕಾಮಿಗಳನು ಅಮಮ |
ಭ್ರಮಿಸಲಿಕ್ಕೆ ವಿಶ್ವಕರ್ಮ |
ಸುಮತಿಯಿಂದ ಗೈದ ಮರ್ಮ |
ನಮಗೆ ಇದುವೆ ಮೋದಧಾಮ || ೧ || 134 ||

**ಸುರುಟಿ - ಏಕ**
ಸರಿ ಭ್ರುಕುಟಿಯೆ ಚಾಪ | ನಯನವೇ |
ಸ್ಮರನಸ್ತ್ರಕಲಾಪ ||
ಹರಿಯೆ ಯಾರ ನಾ | ತರಹರಿಸುವದಿದೆ |
ಒರೆಯೈ ತ್ವರಿತದಿ | ಹರಡುವೆ ವಿಭ್ರಮ || ೧ || 135 ||

**ಬೇಗಡೆ - ರೂಪಕ**
ಪಂಚಬಾಣಸ್ಯಂದನಾ | ಚಂಚಲಿಸುತ ಸುಂದನ ನೀ |
ವಂಚಿಪುದುಪಸುಂದನಾ ||
ಮಿಂಚುಗಣ್ಣ ಹೊಂಚಿ ನೀ ವಿ |
ರಿಂಚಿಯನುಜಸಹಯದಿಂದ |
ಚಂಚಲಾಕ್ಷಿ ಬಂಧುಗಳಲಿ |
ಕೊಂಚ ಕಲಹ ಬಿತ್ತಲೈಸೆ || ೧ || 136 ||

**ಸುರುಟಿ - ಏಕ**
ಮಧುಸೂದನ ಹರಿಯೆ | ದನುಜರ |
ಹೃದಯ ಕೆಡುವ ಪರಿಯೆ ||
ಮಧುರ ಬಾಂಧವ್ಯಕೆ | ಕದನವ ಕಲ್ಪಿಪೆ |
ಇದೊ ಇದೊ ನೋಡೆಲೆ | ಚದುರಿಸಿ ನೋಟವ || ೧ ||

ಒಂದು ಕಣ್ಣಿಗೊಬ್ಬ | ಪರಿಕಿಸ |
ಲಿಂದು ಮದನಹಬ್ಬ ||
ಮಂದಬುದ್ಧಿಗಳ | ಮಂದಹಾಸದೀ |
ಸುಂದರಸಾಗರ | ದಿಂದಳಿವಂದವ || ೨ || 138 ||

**ಭಾಮಿನಿ**
ಕಮಲನೇತ್ರೆಯು ಕಮಲನಾಭಗೆ |
ನಮಿಸಿ ಬೆಡಗಿನ ಮಂದಹಾಸವ |
ಕುಮತಿ ಬಂಧುಗಳೆಡೆಗೆ ಬೀರುತ ಬರಲು ಸಂಭ್ರಮದಿ ||
ಭ್ರಮಿಸಿ ಕಂಡುಪಸುಂದನರರೇ |
ಅಮಮ ಮಿಂಚಿನ ಗೊಂಚಲಿಳಿಯಿತೆ |
ರಮಣಿ ಯಾರಿವಳೆನುತ ತೋರಿದನಾಗ ಅಣ್ಣನಿಗೆ || ೧ || 139 ||

**ಮಧ್ಯಮಾವತಿ - ತ್ರಿವುಡೆ**
ಸುಂದ ನೋಡಿದ ಸುಂದರಾಂಗಿಯ |
ಮಂದಗಾಮಿನಿ ಚಂದರಾನನೆ |
ಬಂದಳಾರಿವಳರರೆ ರತಿ ಶಚಿ ಲಕ್ಷ್ಮಿ ಸತಿಯ |
ಮೀರಿದವಳು || ೧ ||

ಬೀಸಿತೇ ಮೃದು ಮಧುರ ಮಲಯಜ |
ಸೂಸಿ ಗಂಧವ ಚಿಗುರು ಮೂಡಿತು |
ಲೇಸು ಬಂತು ವಸಂತ ಚಂದ್ರಿಕೆ ಪ್ರಭೆಯು ಮೂಡಿ |
ತೋಷ ಬೀರಿ || ೨ ||

ಮಿಂಚುಗಣ್ಣಿನ ಚಂಚಲಾಕ್ಷಿಯು |
ಚಂಚಲಿಸಿ ಮನ ಪದ್ಮವದನೆಯು |
ರಂಜಿಪಳು ಅರೆ ಕುಂಭಕುಚೆ ಭಲೆ ಅನುಜ ಕೇಳು |
ನೋಡು ನೋಡು || ೩ ||

ನೋಟವೆನ್ನೆಡೆಗುಂಟು ನಗುವಿನ |
ಬೇಟೆ ನಿನ್ನೆಡೆ ಚೆಲ್ವ ಕಾಮಿನಿ |
ಚಾಟುಕಾರಳು ಬಂದಳೈ ರಸದೂಟ ಮನಕೆ |
ಸಾಟಿಯಿಲ್ಲ || ೪ || 143 ||

**ಭೈರವಿ - ಝಂಪೆ**
ಕೊಂಚ ಸೈರಿಸು ಅಣ್ಣ | ಮಿಂಚುಗಣ್ಣಳ ಬಣ್ಣ |
ಚಂಚಲಿಸೆ ಮನವನ್ನು | ಹೊಂಚಿನೊಳಗಾತು || ೧ ||

ಕ್ಷಣದಿ ನುಡಿಸುವೆನೆಂದು | ಘನತೆ ಗಾಂಭೀರ್ಯದಲಿ |
ವನಿತೆಯಳ ಮುಂದೆಸೆಗೆ | ದನುಜ ನಡೆತರಲು || ೨ ||

ಖಳನ ಬರ ಕಾಣುತ್ತ | ಚೆಲುವಿನಿಂದಣಕಿಸುತ |
ಲಲನೆ ನೋಡದೆ ಅತ್ತ | ನಳಿನಮುಖ ತಿರುಹೆ || ೩ ||

ಬಿಸುಸುಯ್ದನುಪಸುಂದ | ವಸುಧೆ ತಟ್ಟುತ ಬೆಂದ |
ಶಶಿಮುಖಿಯ ಮನ ಸೆಳೆಯೆ | ಅಸುರ ಕೆಮ್ಮಿದನು || ೪ ||

ನಾರಿಯರ ತೆರ ಕಾಲ | ಗೀರಿದನು ಉಗುರಿಂದ |
ಚಾರುಮತಿ ಸುಮ್ಮನಿರೆ | ಭೂರಿ ಚಿಂತೆಯಲಿ || ೫ ||

ನನ್ನೆಡೆಗೆ ಗಮನವನು | ಚೆನ್ನಾಗಿ ಸೆಳೆಯುವರೆ |
ಇನ್ನೇನ ಗೈಯುವುದು | ಎನ್ನುತಲಿ ದನುಜ || ೬ || 149 ||

**ಭಾಮಿನಿ**

ಕರವ ತಟ್ಟಿದ ಧರೆಯ ಕುಟ್ಟಿದ |
ಹರಳ ಬೀಸಿದ ಬೆರಳು ಕಚ್ಚಿದ |
ತರುಣಿ ಲಕ್ಷ್ಮಿಯ ಸೆಳೆಯೆ ಹಲವಿಧ ಚೇಷ್ಟೆ ನಡೆಸಿರಲು ||
ಸರಿಸಮಯವೆಂದೆಣಿಸಿ ಚದುರೆಯು |
ತಿರುಹಿ ಮುಖವನು ನಟಿಸಿ ಕೋಪವ |
ಅರರೆ ಏನಿದು ತರವೆ ಎನ್ನುತ ನುಡಿಸೆ ದುರುಳರನು || ೧ || 150 ||

**ತೋಡಿ - ಅಷ್ಟ**

ಯಾರಯ್ಯ | ನೀವು | ಯಾರಯ್ಯ ||
ಯಾರಯ್ಯ ಗಂಭೀರ ಪುರುಷರು ನೀವು |
ಧಾರಿಣಿಪಾಲರ ಮಕ್ಕಳ ಚೆಲುವು ||
ವೀರ ಧೀರೋಚಿತ ಠೀವಿಯ ನಿಲುವು |
ಜಾರರ ತೆರ ಭಲೆ ನಿಮ್ಮ ವರ್ತನವು || ೧ ||

ನಾರಿಯು ತಪ್ಪುತ ನಿಂದಿರೆ ದಾರಿ |
ತೋರುತ ವಿಟಕ್ರಮ ತಡೆವಿರಿ ದಾರಿ ||
ವೀರರಿಗುಚಿತವೆ ತಪ್ಪಿನ ದಾರಿ |
ಸಾರುತ ನಿಮ್ಮಿರ ಬಿಡಿ ಬಿಡಿ ದಾರಿ || ೨ || 152 ||

**ಬೇಗಡೆ - ರೂಪಕ**

ಸುಂದರಾಂಗನೆ | ಕುಸುಮನೇತ್ರೆ | ಚಂದಿರಾನನೆ ||
ಪುರುಷರ ಹ್ಯಲ್ಲೋಕದಲ್ಲಿ |
ಪರಿ ಪರಿ ಕಲ್ಲೋಲ ಗೈವ |
ತರುಣಿ ನೀ ಕುಮಾರಿ ಜವ್ವನೆ ||
ಸುಂದನೀತನುಪ | ಸುಂದ ನಾನು |
ನಿಂದೆ ಸರಸಕೆಳಸಿ ನುಡಿಸೆ |
ಕುಂದು ಬಂತೆ ನಮ್ಮ ವರ್ತನೆ ||
ಚೆಲುವೆಯರೊಳು ಚೆಲುವೆ ನಿನ್ನ |
ಒಲಿಸೆ ವರಿಸೆ ದೂರಲೇಕೆ |
ತಿಳಿಸು ನೀನು ಯಾರೆ ಮೋಹನೆ || ೧ || 153 ||

**ಸುರುಟಿ - ಏಕ**

ಮೆಚ್ಚಿದೆ ದಾನವರೆ | ನಿಜ ನಿಜ |
ಹೆಚ್ಚಿನ ವೀರರಿರೆ ||
ಉಚ್ಚ ತಿಲೋತ್ತಮೆ | ಹೆಚ್ಚಿನ ಸುದತಿಯು |
ಮೆಚ್ಚಿಪ ಜಾಣೆಮೆ | ನಿಶ್ಚಯವಿಪ್ಪುದು || ೧ ||

ಸುರನಾರಿಯು ನಾನು | ಶ್ರೀಹರಿ |
ಪೊರೆಯುವನೆನ್ನನು ||
ಸುರ ವಾರಾಂಗನೆ | ವರ್ಗಕೆ ಸೇರಿಸೆ |
ಹರಿ ನೆನಸಿರೆನಾ ತೊರೆದೈ ತಂದೆನು || ೨ ||

ಸುರಸಂದೋಹದಲಿ | ಗೌರವ |
ಇರದೆಂದರಿಯುತಲಿ ||
ಸ್ಮರನಂತೆಸೆಯುವ | ಸರಸಿಗನೊಬ್ಬನ |
ವರಿಸಲು ಅರಸುತ ಚರಿಸುತ ಬಂದೆನು || ೩ || 156 ||

**ಭಾಮಿನಿ**
ಚಂದಿರಾನನೆಯೆಂದ ಸವಿನುಡಿ |
ಯಿಂದ ಪುಳಕಿತನಾಗಿ ಸುಂದನು |
ಬಂದು ಒದಗಿದ ಈ ಸುಸಂಧಿಯ ಕಳೆಯೆನೆಂದೆನುತ ||
ಮಂದಗಾಮಿನಿ ಮೋದವಾಯಿತು |
ಸುಂದರಾಂಗಿಯೆ ವರರು ನಾವೇ |
ಇಂದು ನಿಂದಿರೆ ಮುಂದೆ ವರಿಸುತ ಮುದವ ಗೊಳಿಸೆನಲು || ೧ || 157 ||

**ಶಂಕರಾಭರಣ - ಮಟ್ಟೆ**
ವೀರಪುರುಷ ವರಿಸಲೆಂತು |
ತೋರ್ವರಲ್ಲ ಇಬ್ಬರಿಂತು |
ಧೀರನೊಬ್ಬ ಸಾಕೆನುತ್ತ | ನೀರೆ ಪೇಳಲು || ೧ || 158 ||

**ಶಂಕರಾಭರಣ - ಮಟ್ಟೆ**
ತಮ್ಮನೀತ ಅಣ್ಣ ನಾನೇ |
ನಮ್ಮೊಳಿಲ್ಲ ಭೇದ ರನ್ನೆ |
ಒಮ್ಮೆ ಆರಿಸೈಯ ನೀನೆ | ಧಿಮ್ಮನೊಬ್ಬನ || ೧ || 159 ||

**ಶಂಕರಾಭರಣ - ಮಟ್ಟೆ**
ಅಬ್ಬ ರೂಪ ಒಂದೆ ಸಹಸ |
ಇಬ್ಬರಲ್ಲು ಪ್ರೇಮಪಾಶ |
ಹಬ್ಬುತಿಹುದು ಮನದ ದೋಷ | ಮಬ್ಬು ಕಣ್ಣಿಗೆ || ೧ || 160 ||

**ಶಂಕರಾಭರಣ - ಮಟ್ಟೆ**
ಇಬ್ಬರಲ್ಲು ಪ್ರೇಮ ಪಾಶ |
ಹಬ್ಬಲೊಳಿತು ನಮಗೆ ತೋಷ |
ಇಬ್ಬರಿಂಗು ಒಂದೆ ಆಶೆ | ಒಬ್ಬಳಾಳ್ವುದು || ೧ || 161 ||

**ಶಂಕರಾಭರಣ - ಮಟ್ಟೆ**
ಒಬ್ಬಳಾಳಬಹುದು ಎಂದು |
ತಬ್ಬಿ ಹಲರ ನಾರಿಯಿಂದು |
ಸಭ್ಯವೇನು ಬಹುದು ಕುಂದು | ದಾನವಾಗ್ರಣಿ || ೧ || 162 ||

**ಶಂಕರಾಭರಣ - ಮಟ್ಟೆ**
ಲಬ್ಧವಾದ ಸುಖವನುಂಡು |
ಲುಬ್ಧ ಮನವ ತಣಿಸಿಕೊಂಡು |
ಮುಗ್ಧೆಯಿಹುದು ತೋಷಗೊಂಡು | ಸಭ್ಯವಲ್ಲವೇ || ೧ || 163 ||

**ಸೌರಾಷ್ಟ್ರ - ತ್ರಿವುಡೆ**
ಎಷ್ಟು ಹೇಳಿದರೇನು ನಿಮ್ಮಯ |
ದೃಷ್ಟಿಯೊಂದೇ ಭೇದವಿಲ್ಲವು |
ಕಷ್ಟ ವರಿಸಲು ಮನವು ಒಪ್ಪದು | ಬಿಟ್ಟು ನಿಮ್ಮ || ೧ ||

ಬೇರೆ ಸುಂದರ ಸೊಗಸುಗಾರನ |
ಬೇರೆ ಕಡೆ ಅರಸುತ್ತ ವರಿಸುವೆ |
ಸಾರಿ ಎನುತಿರೆ ವಿರಹದಿಂದುಪ | ಸುಂದನೆಂದ || ೨ ||

ತೆರಳಬೇಡವೆ ಕಾಮಿನೀಮಣಿ |
ತರುಣಿತರಣಿಯೆ ಸರ್ವತೆರದಲಿ |
ಮೆರೆವೆ ನಾನೇ ಒಲಿದು ಕೂಡುತ | ತೋಷ ಪಡಿಸೆ || ೩ ||

ರೂಪ ಗುಣ ಸಂಪನ್ನ ಶೌರ್ಯದಿ |
ರೂಪುಗಾರ್ತಿಯೆ ಪ್ರೇಮ ಸರಸದಿ |
ನಾ ಪ್ರತಾಪಿಯು ಮದನತಾಪವ | ಸಹಿಸೆ ವರಿಸೆ || ೪ || 167 ||

**ದ್ವಿಪದಿ**
ತಮ್ಮನಾಡಿದ ನುಡಿಗೆ ಖತಿ ತಾಳಿ ಸುಂದ |
ಹೆಮ್ಮೆಯೊಳು ತಾ ಶ್ರೇಷ್ಠನಹೆನೆನುತಲೆಂದ || ೧ || 168 ||

**ಸುರುಟಿ - ಏಕ**
ಮನಸಿಜಸತಿ ಜಾಣೆ | ಹೋಲಿಕೆ |
ನನಗಿಲ್ಲವು ಕಾಣೆ ||
ಅನುಜನು ಹೀನನು | ದನುಜ ಕುಲಾಗ್ರಣಿ |
ಹಣಿದಿಹೆ ಸುರರನು | ಮನವಿಡು ಬಾರೆ || ೧ || 169 ||

**ಕೇದಾರಗೌಳ - ಝಂಪೆ**
ಸುಂದನಾಡಿದ ಸಟೆಗಳ | ನಂಬದಿರು |
ಸುಂದರಾನನೆ ಅರಿಗಳ ||
ಕೊಂದುದಿಲ್ಲವು ಛಲಬಲ | ನನ್ನಿಂದ |
ಹೊಂದಿರ್ಪ ಪೀಠ ಖಿಲ್ಲ || ೧ || 170 ||

**ಸುರುಟಿ - ಏಕ**
ಎಂತಹ ಮರುಳನಿವ | ಮಾವುತ |
ದಂತಿಯ ಅರಿದೊಳವ ||
ಸ್ವಂತದ ಕಾರ್ಯವ | ನಿಂತುರೆ ಗೈಸಲು |
ದಂತಿಗೆ ಬಹುದೇ | ಎಂತಹ ಹಿರಿಮೇ || ೧ || 171 ||

**ಕೇದಾರಗೌಳ - ಝಂಪೆ**
ಹಿರಿಯಣ್ಣನೆನುತ ಭಕ್ತಿ | ನಾನಿಡಲು |
ಸ್ಮರಿಸದಿಂತಾಡ್ವ ಯುಕ್ತಿ ||
ಸರಿಬಾರದೀ ಕುಯುಕ್ತಿ | ಲಲಿತಾಂಗಿ |
ಸೊರಗಿಹುದು ಅವನ ಶಕ್ತಿ || ೧ || 172 ||

**ಭಾಮಿನಿ**
ದೈತ್ಯಬಾಂಧವರಿಂತು ತಮ್ಮೊಳು |
ಅತ್ಯಧಿಕ ತಾವೆನುತ ಮಾತಿನ |
ಬತ್ತಳಿಕೆ ಬಿತ್ತರಿಸುತಿರಲಾ ತಿಲೋತ್ತಮೆಯೂ ||
ಇತ್ತ ತನ್ನಯ ಕಾರ್ಯ ಸಿದ್ಧಿಗೆ |
ಉತ್ತಮದ ಅವಕಾಶವೆನ್ನುತ |
ಮತ್ತೆ ನುಡಿದಳು ದೈತ್ಯರೊಳು ಮೃದುಹಾಸ ಬೀರುತಲಿ || ೧ || 173 ||

**ಕೇದಾರಗೌಳ - ಅಷ್ಟ**
ಜಗಳವೇತಕೆ ಬಿಡಿ ದಾನವಶ್ರೇಷ್ಠರೆ |
ಹೊಗಳಿಕೆಯಲ್ಲ ಕೇಳಿ ||
ಅಗಣಿತ ರೂಪವು ದ್ವಿಗುಣಿತ ಬಲಿಗಳು |
ಸೊಗಸೇನು ಕಲಹ ಪೇಳಿ || ೧ ||

ಸುಂದನೆಂಬವ ನೀನು ಸುಂದರಾಂಗನು ನಿಜ |
ಹೊಂದಿಹೆ ಮೋಹವನ್ನು ||
ಎಂದಿಗಾದರು ಉಪಸುಂದ ಪೇಳಿದ ನುಡಿ |
ಯಿಂದಲಿ ವಂಚಿಸೆನು || ೨ || 175 ||

**ಸುರುಟಿ - ಏಕ**
ಸೊಕ್ಕಿನ ಉಪಸುಂದ | ಮೋಹನೆ |
ಇಕ್ಕುವ ಜಗಳೆಂದ ||
ಚಿಕ್ಕವ ಪ್ರೇಮಕೆ | ತಕ್ಕವನಾಗನು |
ಲೆಕ್ಕಿಸೆ ದಿವಿಜರ | ಮುಕ್ಕಡಿ ಗೈದಿಹೆ || ೧ || 176 ||

**ಕೇದಾರಗೌಳ - ಅಷ್ಟ**
ಆದರೊಂದಿದೆ ತಮ್ಮನುಪಸುಂದನಾದರು |
ಮಾದಕ ರೂಪಿಗನು ||
ಶೋಧಿಸೆ ಇಬ್ಬರ ಮೋದವು ಮನಸಿಗೆ |
ಖೇದವ ಪಟ್ಟಿಹೆನು || ೧ || 177 ||

**ಸುರುಟಿ - ಏಕ**
ನಾನೇ ರೂಪಿಗನು | ಸರಿಜೊತೆ |
ಜಾಣೆಯೆ ವರಿಸಿನ್ನು ||
ತ್ರಾಣಿಯು ಹರಿಯನು | ತ್ರಾಣವ ಮುರಿದಿಹ |
ದಾನವ ಬಲಿ ಬಲ | ಹೀನನು ಸುಂದ || ೧ || 178 ||

**ಕೇದಾರಗೌಳ - ಅಷ್ಟ**
ಇಬ್ಬರೊಳೊಬ್ಬರ ವರಿಸಲಿನ್ನೊಬ್ಬರ |
ಅಬ್ಬಬ್ಬ ಕೇಡಲ್ಲವೇ ||
ಇಬ್ಬರೊಳೊಬ್ಬರು ಉಬ್ಬುತ ಬಲ ತೋರೆ |
ತಬ್ಬುತ ನಾ ನಲಿವೆ || ೧ ||

ಕದನವಾಡಿಸೆ ಮನವಿಲ್ಲವು ಕೇಳಿರಿ |
ಅದಕೀಗ ತೆರಳುವೆನು ||
ಮದನನ ಮದುವೆಗೆ ಬದಲಿಗನರಸುತ |
ಮುದದೊಳಗುಳಿಯುವೆನು || ೨ || 180 ||

**ಭಾಮಿನಿ**
ತರುಣಿ ರನ್ನಳೆ ತೆರಳಬೇಡವೆ |
ಧುರವ ಗೈಯುತ ಮೆರೆಸಿ ಪೌರುಷ |
ಸರಿ ಮಿಗಿಲು ಯಾರೆಂದು ತೋರ್ಪೆವುಯೆಂದನುಪಸುಂದ ||
ಸರಿ ಸರಿಯು ಈ ಪರಿಯು ಎನ್ನುತ |
ಸುರಪಸಂಕುಲವೈರಿ ಸುಂದನು |
ಕರೆದ ಕಾಳಗಕಾಗಿ ತಮ್ಮನ ಕಾಮ ವಿಭ್ರಮದಿ || ೧ || 181 ||

**ಶಂಕರಾಭರಣ - ಮಟ್ಟೆ**
ತಮ್ಮ ಬಾರೊ ರಣವ ಹೂಡಿ |
ಸುಮ್ಮನಾಟವಾಡಿ ನೋಡಿ |
ನಮ್ಮ ಬಲಪರೀಕ್ಷೆ ಮಾಡಿ | ಒಮ್ಮೆ ತೋರಿಪ || ೧ ||

ಅಣ್ಣ ಇದೆಕೊ ಒಂದು ಗುದ್ದು |
ಸಣ್ಣದಲ್ಲ ನಿನ್ನ ಗೆದ್ದು |
ರನ್ನೆಯೊಲಿಪ ಛಲದ ಜಿದ್ದು | ಮುನ್ನ ತಾಳಿಕೊ || ೨ ||

ಭಳಿರೆ ಭಳಿರೆ ಮಲ್ಲನಹುದು |
ಕೊಳುಗುಳದಲಿ ಗೆಲುವು ಬಹುದು |
ತಿಳಿಯಪಡಿಪೆಯೆನ್ನ ಗುದ್ದು | ಥಳಕ ಕಾಣೆಲೊ || ೩ ||

ಹಿರಿಯ ನೀನು ಕಿರಿಯನಾಶೆ |
ಅರಿತು ಜಗಳಗೈಯೆ ಲೇಸೆ |
ತರುಣಿರನ್ನೆ ಬೇಕು ವರಿಸೆ | ತೊರೆವುದೊಳ್ಳಿತು || ೪ ||

ಅವಳಿಗೆನ್ನಮೇಲೆ ಮೋಹ |
ಅವಳು ಅರಿವಳೆನ್ನದಾಹ |
ಬವರವಿದ್ಯೆಜಾಣ್ಮೆಗಹಹ | ಅವಳು ನಗುವಳು || ೫ ||

ನೋಡಿ ನಿನ್ನ ನಕ್ಕುದಲ್ಲ |
ನೋಡಿ ನನ್ನ ಶೌರ್ಯ ಮಳ್ಳ |
ನೀಡೆ ಹುರುಪ ನಕ್ಕು ನಿಲ್ಲ | ಗಾಢಗಾತ್ರಿಯು || ೬ || 187 ||

**ಮಾರವಿ - ಏಕ**
ಬಿಡು ಬಿಡು ಬಾ ಬಡಿವಾರವನನುಜನೆ |
ಸಡಗರವಿದು ಸಲ್ಲ ||
ತಡೆ ಹಿಡಿ ಕಡುಹಿರೆ ಮಡಿಸುವೆನೆನ್ನುತ |
ಜಡಿದನು ಗುದ್ದಗಳ || ೧ ||

ಭಲೆ ಭಲೆ ಅಣ್ಣನೆ ಕಳಹುವೆಯೇತಕೆ |
ಚೆಲುವಿನ ನಾರಿಯಳ ||
ಒಲಿಸದೆ ಬಿಡುವೆನೆ ಕಾಮದೊಳೇರಿದ |
ಇಳಿಸುವೆ ಪಿತ್ಥಗಳ || ೨ ||

ಕಿರಿಯವನೆನ್ನುತ ಕರುಣೆಯ ತೋರ್ದರೆ |
ಅರರೇ ಸೊಕ್ಕಿರುವೆ ||
ಖರೆ ಹಿರಿಗುದ್ದನು ಹೇರಲು ಶೈಮಿನಿ |
ಪರಿಕಿಸು ನೀ ತೆರಳ್ವೆ || ೩ || 190 ||

**ಭಾಮಿನಿ**
ಎನುತಲುಭಯರು ಆ ತಿಲೋತ್ತಮೆ |
ಘನದಿ ಬೀಸಿದ ಮೋಹಜಾಲಕೆ |
ಕ್ಷಣದಿ ಕಾದುತ ಮರಣಪಟ್ಟರು ದನುಜಬಂಧುಗಳು ||
ಅನುಜನೊದ್ದುದರಿಂದ ಸುಂದನು |
ಅನುಜನನು ಗುದ್ದಲ್ಕೆ ಅಗ್ರಜ |
ಇನಸುತನ ಮನೆಗಂದು ತೆರಳಲು ಹರಿಯು ಬರುತೆಂದ || ೧ || 191 ||

**ಸೌರಾಷ್ಟ್ರ - ತ್ರಿವುಡೆ**
ಹೇ ತಿಲೋತ್ತಮೆ ಕಾಮಜಾಲದಿ |
ಧೂರ್ತರಳಿಸುತ ಸುರರ ಪೊರೆದೆಯ |
ಖ್ಯಾತಿ ಹರಡಿತು ನಿನ್ನ ಘನತೆಯು | ಹಿರಿಯದೆನಲು || ೧ ||

ಹರಿಯೆ ನೀ ಜಗಸೂತ್ರಧಾರನು |
ಪೊರೆವೆ ನಾನಾ ವಿಧದಿ ಹೊಗಳಿಕೆ |
ತರವೆ ವಂದನೆಯೆನಲು ಮಂಗಲ | ಸುರರು ಹಾಡಿ || ೨ ||

ಧರೆಯೊಳಗೆ ವರ ಕ್ಷೇತ್ರವೆನ್ನಿಸಿ |
ಮೆರೆವ 'ಗೋಕರ್ಣ'ದಲಿ ಬರೆದನು |
'ಬರವಣೀ' ಕುಲಜಾತ 'ಮಾಬಲ' ತಿದ್ದಿ ಮೆರೆಸಿ || ೩ || 194 ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಆನಂದ ಮುದ್ರಣಾಲಯ, ಗೋಕರ್ಣ

**ಪ್ರಸಂಗ ಪ್ರತಿ ಆಧಾರ:** ಆನಂದ ಮುದ್ರಣಾಲಯ, ಗೋಕರ್ಣ ಮುದ್ರಿತ ಪ್ರಸಂಗ ಪ್ರತಿ

**ಪ್ರಸಂಗ ಪ್ರತಿ ಕೊಟ್ಟವರು:** ಉಮೇಶ್ ಶಿರೂರು

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ರವಿ ಮಡೋಡಿ

**ಅಂತರಜಾಲ ಪ್ರತಿ ಬರವಣಿಗೆ:** ರಂಜನಾ ಭಟ್

**ಅಂತರಜಾಲ ಪ್ರತಿ ವಿನ್ಯಾಸ:** ರವಿ ಮಡೋಡಿ

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ಅಶೋಕ ಮುಂಗಳೀಮನೆ, ದಿನೇಶ್ ಉಪ್ಪೂರ

**ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ